



# ಸರ್ವೋದಯ ಕರ್ನಾಟಕ ಪಕ್ಷ





## ಜಿಲ್ಲಾ ಪಂಚಾಯ್ತಿ ಮತ್ತು ತಾಲ್ಲೂಕು ಪಂಚಾಯ್ತಿ ಚುನಾವಣೆ–2016


ಆಟೋರಿಕ್ಷಾ ಗುರುತು

## ನಿಜವಾದ ಅಧಿಕಾರ ವಿಕೇಂದ್ರಿಕರಣ–ಸರ್ವೋದಯ ಪಕ್ಷದ ಗುರಿ

## ಜನಾಧಿಕಾರಕ್ಕಾಗಿ

# ಸರ್ವೋದಯ ಪಕ್ಷದ ಅಭ್ಯರ್ಥಿಗಳನ್ನು ಬೆಂಬಲಿಸಿ

ಗೌರವಾನ್ವಿತ ಮತದಾರ ಬಂಧುಗಳೇ

ಕರ್ನಾಟಕದ ರೈತ ಚಳುವಳಿ, ದಲಿತ ಚಳುವಳಿ, ಭಾಷಾ ಚಳುವಳಿ ಹಾಗೂ ಜನಪರ ಚಳುವಳಿಗಳ ಆಶಯಗಳಿಂದ ರೂಪುಗೊಂಡಿರುವ ಪಕ್ಷ– "ಸರ್ವೋದಯ ಕರ್ನಾಟಕ". ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು, ಸರ್ವೋದಯ ಪಕ್ಷದ ಧ್ಯೇಯ. ಇಂದಿನ ಬಜಾರಿ ರಾಜಕಾರಣ "ಬಂಡವಾಳ ಹೂಡಿ ಬಂಡವಾಳ ತೆಗೆ" ಎಂಬುದಾಗಿದೆ. ಜನ ಪ್ರತಿನಿಧಿಗಳನ್ನು ಮಾರಾಟದ ಸರಕಾಗಿ ರೂಪಿಸಿದೆ. ಅಧಿಕಾರ ರಾಜಕಾರಣ ಎಂಬುದು ಸಾಮಾನ್ಯ ಜನರಿಗೆ ಎಟಕದ್ದು ಎಂಬುದಾಗಿದೆ. ನಮ್ಮ ಕಣ್ಣೆದುರಿಗೆ ನೈಸರ್ಗಿಕ ಸಂಪತ್ತು ಲಂಗು ಲಗಾಮಿಲ್ಲದೆ ಲೂಟಿಯಾಗುತ್ತಿದೆ. ಕೃಷಿ ಭೂಮಿ ಬಂಡವಾಳಿಗರ, ಲೂಟಿಕೋರರ ಪಾಲಾಗುತ್ತಿದೆ. ಕೃಷಿ ಕ್ಷೇತ್ರವೂ ಕಂಪನಿಗಳ ಹಿಡಿತಕ್ಕೆ ಒಳಗಾಗುತ್ತಿದೆ. ರೈತ, ದಲಿತ, ಕಾರ್ಮಿಕ ಎಲ್ಲಾ ವರ್ಗದ ಶ್ರಮಜೀವಿಗಳ ಬದುಕು ತಲ್ಲಣಗೊಂಡಿದೆ. ಎಲ್ಲಾ ಹಂತದಲ್ಲೂ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಇವಕ್ಕೆಲ್ಲಾ ಬೆರಳೆಣಿಕೆ ಜನ ಮಾತ್ರ ಕಾರಣರಾಗಿದ್ದಾರೆ. ಕೇವಲ 100 ಜನರ ಕೈಯಲ್ಲೇ ದೇಶದ ಅರ್ಧ ಸಂಪತ್ತು ದರೋಡೆಯಾಗಿ ಸೇರಿಕೊಂಡಿದೆ. ಹಾಗಾಗಿ ಇಂದು ಗ್ರಾಮೀಣ ಬದುಕು ಸ್ವಾವಲಂಬನೆ ಕಳೆದುಕೊಂಡಿದೆ. ಹಳ್ಳಿಗಾಡು ಸಮುದಾಯ ಕೆಲಸಕ್ಕಾಗಿ ಅಲೆಯುತ್ತಾ ಅಲೆಮಾರಿ ಜೀವನ ನಡೆಸುವಂತಾಗಿದೆ.

ಇವೆಲ್ಲವನ್ನು ಅಸಹಾಯಕತೆಯಿಂದ ನೋಡುತ್ತಾ ತಮ್ಮ ಪಾಡಿಗೆ ತಾವಿರುವ ಬಹುಸಂಖ್ಯಾತ ಒಳ್ಳೇ ಮನಸ್ಸುಗಳನ್ನು ಒಗ್ಗೂಡಿಸಿ ಈ ನಾಡಿನ ನೆಲ, ಜಲ ಭಾಷೆ, ರಕ್ಷಣೆಯ ಉಳಿವಿಗಾಗಿ, ಈ ನಾಡಿನಲ್ಲಿ ಸಹನೆ ಮತ್ತು ಸಾಮರಸ್ಯ ಕಾಪಾಡುವ ಜನಪರ ರಾಜನೀತಿಯನ್ನು ಪರ್ಯಾಯವಾಗಿ ಕಟ್ಟುವುದೆ ಸರ್ವೋದಯ ಕರ್ನಾಟಕ ಪಕ್ಷದ ದೂರದೃಷ್ಟಿಯಾಗಿದೆ.

ಸ್ವಾತಂತ್ರ್ಯ ಬಂದು 68 ವರ್ಷ ಕಳೆದ ಮೇಲೆ ಏನೇನಾಗಿದೆ ಎಂದು ಒಂದು ಸಲ ನೋಡಿದರೆ– ನಾವು ಉಸಿರಾಡುವ ಗಾಳಿ ವಿಷಮಯವಾಗಿದೆ. ನಾವು ಕುಡಿಯುವ ನೀರು, ಅಂತರ್ಜಲ ಪಾತಾಳ ಕಂಡಿರುವುದರಿಂದ ಅದೂ ವಿಷಮಯವಾಗಿದೆ. ತಿನ್ನುವ ಅನ್ನವೂ ರಾಸಾಯನಿಕ ಕೃಷಿಯ ದೌರ್ಜನ್ಯಕ್ಕೆ ಸಿಕ್ಕಿ ಅದೂ ವಿಷಮಯವಾಗಿದೆ. ನೈಸರ್ಗಿಕ ಸಂಪತ್ತನ್ನು ಖಾಸಗಿ ಕಂಪನಿಗಳು ಧ್ವಂಸ ಮಾಡುತ್ತಿರುವುದರಿಂದ ಈ ವಿಷವನ್ನು ನಾವು ಉಣ್ಣಬೇಕಾಗಿದೆ. ಇದನ್ನೇ ಅಭಿವೃದ್ಧಿ, ಅಭಿವೃದ್ಧಿ ಎಂದು ಆಳ್ವಿಕೆ ನಡೆಸುವವರು ಮಂಕುಬುದ್ಧಿ ಎರಚುತ್ತಿದ್ದಾರೆ.

ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಗ್ರಾಮೀಣ ಜನರೇ ಸಂಪೂರ್ಣವಾಗಿ ಪಾಲ್ಗೊಂಡು ಆಡಳಿತ ನಡೆಸುವಂತಹ ಜಿಲ್ಲಾ ಪಂಚಾಯ್ತಿ ಮತ್ತು ತಾಲ್ಲೂಕು ಪಂಚಾಯ್ತಿಗಳಿಗೆ ಚುನಾವಣೆ ನಡೆಯುತ್ತಿದೆ. ಸರ್ವೋದಯ ಕರ್ನಾಟಕ ಪಕ್ಷ

ರಾಜ್ಯಾದ್ಯಂತ ಸುಮಾರು 100 ಕ್ಕಿಂತಲೂ ಹೆಚ್ಚು ಜಿಲ್ಲಾ ಪಂಚಾಯ್ತಿ ಕ್ಷೇತ್ರಗಳಲ್ಲಿ ಅದಕ್ಕಿಂತಲೂ ಹೆಚ್ಚು ತಾಲ್ಲೂಕು ಪಂಚಾಯ್ತಿ ಕ್ಷೇತ್ರಗಳಲ್ಲಿ ಸ್ಪರ್ಧಿಸಿದೆ. ಗ್ರಾಮೀಣ ಜನರ ಸರ್ವೋದಯ ಅಭಿವೃದ್ಧಿಗಾಗಿ ಸರ್ವೋದಯ ಕರ್ನಾಟಕ ಪಕ್ಷದ ಅಭ್ಯರ್ಥಿಗಳು ಸ್ಪರ್ಧಿಸಿರುವ ಕಡೆ ಸಮಸ್ತ ಮತದಾರರು ಅವರನ್ನು ಬೆಂಬಲಿಸಿ ಆಯ್ಕೆಗಾಗಿ ವಿನಂತಿಸುತ್ತೇವೆ.

ಆಯ್ಕೆಯಾದ ನಮ್ಮ ಪಕ್ಷದ ಅಭ್ಯರ್ಥಿಗಳು ಈ ಕೆಳಕಂಡ ಅಂಶಗಳನ್ನು ರೂಪಿಸಿ ಜಾರಿಗೆ ತರುವಂತಾಗಲು ಬದ್ಧರಾಗಿರುತ್ತಾರೆ.

1. **ಗ್ರಾಮೀಣ ಪ್ರದೇಶದಲ್ಲಿರುವ ವಿದ್ಯಾವಂತ ನಿರುದ್ಯೋಗಿಗಳು ಹಾಗೂ ಶಿಕ್ಷಣವನ್ನು ಪೂರೈಸಲಾಗದೆ ಅತಂತ್ರವಾಗಿರುವ ಯುವಜನತೆಯ ಸಾಮರ್ಥ್ಯವನ್ನು ಸದ್ಬಳಕೆ ಮಾಡಿಕೊಳ್ಳಲು, ಶಾಲೆ ಬಿಟ್ಟವರನ್ನು ವಿಶೇಷ ಪ್ರತಿಭೆಗಳೆಂದು ವಿದೇಶಗಳಲ್ಲಿ ಪರಿಗಣಿಸಿ ಅವರ ಪ್ರತಿಭೆಗೆ ಉತ್ತೇಜನ ಕೊಟ್ಟಿರುವಂತೆಯೇ ನಮ್ಮಲ್ಲೂ ಆಗಬೇಕು. ಅಂದರೆ ಅವರಲ್ಲಿರುವ ಕೌಶಲ್ಯ–ಸಂಗೀತ, ಚಿತ್ರಕಲೆ, ಅಭಿನಯ, ಆಟ, ವೈಜ್ಞಾನಿಕ ಸಂಶೋಧನೆ ಇತ್ಯಾದಿ ವಿಶೇಷ ಪ್ರತಿಭೆಗಳನ್ನು ಗುರುತಿಸಿ ಅವು ಅರಳುವಂತಾಗಿ ಜೀವನ ನಿರ್ವಹಣೆಗೂ ಪೂರಕವಾಗುವಂತೆ ವಾತಾವರಣ ಉಂಟುಮಾಡುವುದು.**
2. ಆರ್ಥಿಕ ವಿಕೇಂದ್ರೀಕರಣವಾಗದೆ ಹಾಗೂ ಗ್ರಾಮ ಸ್ವಾವಲಂಬನೆಯಾಗದೆ ಸ್ವರಾಜ್ ಕನಸು ನನಸಾಗುವುದಿಲ್ಲವಾದ್ದರಿಂದ ಪಂಚಾಯತ್‌ಗೆ ಹೆಚ್ಚು ಅನುದಾನ ನೀತಿಗಾಗಿ ಒತ್ತಡ ತರುವುದು, ಹೋರಾಟ ಮಾಡುವುದು ಹಾಗೂ ಎಲ್ಲಾ ಹಂತದ ಗ್ರಾಮಾಡಳಿತದಲ್ಲಿ ಜನರ ಪಾಲ್ಗೊಳ್ಳುವಿಕೆಗೆ ಒತ್ತು. ಆಡಳಿತ ಮತ್ತು ಕಾರ್ಯಕ್ರಮದಲ್ಲಿ ಪಾರದರ್ಶಕತೆ ಹಾಗೂ ಸರಕಾರದ ಅನುದಾನ ಅಥವಾ ಯೋಜನೆಗಳಲ್ಲಿ ಫಲಾನುಭವಿಗಳ ಆಯ್ಕೆ ಗ್ರಾಮ ಸಭೆಯಲ್ಲೆ ತೀರ್ಮಾನ. ಯೋಜನೆಗಳಿಗೆ ಅನುದಾನ ಮತ್ತು ಅದರ ಜಾರಿ ಬಗ್ಗೆ ಸಾರ್ವಜನಿಕ ಪ್ರಕಟಣೆ ಮಾಡುವುದು.
3. ಪಾತಾಳ ಕಂಡಿರುವ ಅಂತರ್ಜಲವನ್ನು ಸಂರಕ್ಷಿಸಿ ಜಲವನ್ನು ವಿಷಮುಕ್ತಗೊಳಿಸುವುದು ಹಾಗೂ ಬೋರ್‌ವೆಲ್‌ಗಳಿಗೆ ಜಲ ಮರುಪೂರಣದ ಕೆಲಸ–ಕಾರ್ಯ ಹಮ್ಮಿಕೊಳ್ಳುವುದು.
4. ಸೋಲಾರ ವಿದ್ಯುತ್‌ನ್ನು ಸಮರ್ಪಕ ಬಳಕೆ ಮತ್ತು ಅನುಷ್ಠಾನಕ್ಕಾಗಿ ಕಾರ್ಯಪ್ರವೃತ್ತರಾಗುವುದು.
5. ಪ್ರಾಥಮಿಕ ಶಿಕ್ಷಣವನ್ನು ಸಮುದಾಯದ ಸಹಭಾಗಿತ್ವದಲ್ಲಿ ಸರ್ಕಾರಿ ಶಾಲೆಗಳನ್ನು ಉಳಿಸುವುದು ಹಾಗೂ ಉತ್ತಮಗೊಳಿಸುವುದು.
6. ಪ್ರತಿ ಪಂಚಾಯ್ತಿಗೆ ಒಂದು ದೇಶಿತಳಿ ಬಿತ್ತನೆ ಬೀಜದ ಬ್ಯಾಂಕ್ ಸ್ಥಾಪನೆ.
7. ಸಾಮಾಜಿಕ ಅರಣ್ಯಕ್ಕೆ ಒತ್ತು ನೀಡಿ ಹಸರೀಕರಣಕ್ಕೆ ಆದ್ಯತೆ.
8. ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯದ ಭಾಗವಹಿಸುವಿಕೆಯ ಮೂಲಕ ಉತ್ತಮಗೊಳಿಸುವುದು.
9. ಉದ್ಯೋಗ ಖಾತರಿ ಯೋಜನೆಯಲ್ಲಿ ಗೋಲ್‌ಮಾಲ್ ಆಗದಂತೆ ಪಾರದರ್ಶಕತೆ ನೀತಿ ಅಳವಡಿಸುವುದು.
10. ಗ್ರಾಮೀಣ ಪರಿಸರಕ್ಕೆ ಒಗ್ಗುವ ಹಾಗೂ ಕೃಷಿ ಪೂರಕ ಉದ್ಯಮಗಳಿಗೆ ಒತ್ತು ನೀಡಿ ಗ್ರಾಮೀಣ ಕುಟುಂಬಗಳನ್ನು ಆರ್ಥಿಕವಾಗಿ ಸಬಲೀಕರಿಸಲು ನಿರಂತರ ಪ್ರಯತ್ನ ಮಾಡುವುದು.
11. ಮಹಿಳಾ ಸ್ವಸಹಾಯ ಸಂಘಗಳನ್ನು ಬಲಿಷ್ಠಗೊಳಿಸಿ ಮಹಿಳೆಯರ ಉದ್ಯೋಗ ಕೌಶಲ್ಯಕ್ಕೆ ಒತ್ತು ಕೊಡುವುದು ಮತ್ತು ಆರ್ಥಿಕ ಸ್ವಾವಲಂಬನೆಗೆ ಕಾರ್ಯಕ್ರಮ ರೂಪಿಸುವುದು.
12. ನಿರುದ್ಯೋಗಿ ಗ್ರಾಮೀಣ ಯುವಕರಿಗೆ ಕೃಷಿ ಪೂರಕ ಉದ್ಯಮಗಳನ್ನು ನಡೆಸಲು ಉತ್ತೇಜನ ನೀಡುವುದು.

**ಪ್ರಕಟಣೆ : ಅಭಿರುಚಿಗಣೇಶ್, ಯುವರಾಜ್ಯಾಧ್ಯಕ್ಷರು, ಸರ್ವೋದಯ ಕರ್ನಾಟಕ ಪಕ್ಷ, ಪ್ರತಿಗಳು –5000**